# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 24/08/2018 ರಂದು 4.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯರವರ ಅಧ್ಯಕ್ಷತೆಯಲ್ಲಿ ನಡೆದ 47ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ ಕುಲಸಚಿವ (ಪ್ರಭಾರ), ಸ್ಕೂಲ್ ನಿರ್ದೇಶಕರು, ವಾಣಿಜ್ಯ ಮತ್ತು ನಿರ್ವಹಣಶಾಸ್ತ್ರ ಮತ್ತು<br>ಶೈಕ್ಷಣಿಕ ಮಂಡಳಿಯ ಸದಸ್ಯರು,<br>ಕರಾಮುವಿ, ಮೈಸೂರು. |
| **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಪ್ರೊ. ಡಿ.ಟಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಮತ್ತು ನಿರ್ದೇಶಕರು ಮಾನವಿಕ ಸ್ಕೂಲ್, ಕರಾಮುವಿ, ಮೈಸೂರು. |
| **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಡಾ॥ ಲಕ್ಷ್ಮಿ.ಎನ್**<br>ನಿರ್ದೇಶಕರು (ಪ್ರಭಾರ) ಶಿಕ್ಷಣ ಶಾಸ್ತ್ರ ಸ್ಕೂಲ್<br>ಕರಾಮುವಿ, ಮೈಸೂರು |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ 47ನೇ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

24/8/18
ಕುಲಸಚಿವರು

24/8
ಕುಲಪತಿಗಳು

**ವಿಷಯ ಸಂಖ್ಯೆ:47.01**

**2018-19 ನೇ ಸಾಲಿನ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿರುವ ಬಗ್ಗೆ.**

2018-19 ನೇ ಸಾಲಿನಲ್ಲಿ ಪ್ರವೇಶಾತಿಯನ್ನು ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಕೋರ್ಸ್‌ಗಳಿಗೆ UGC ಯಿಂದ ಮಾನ್ಯತೆ ದೊರೆತಿದ್ದು, ಸದರಿ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಆದ್ದರಿಂದ ಈ ಕೆಳಕಂಡ 17 ವಿಷಯಗಳಿಗೆ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಲಾಗಿರುತ್ತದೆ.

1. ಬಿ.ಎ
2. ಬಿ.ಕಾಂ.
3. B.Lib.I.Sc
4. ಎಂ.ಎ - ಪ್ರಾಚೀನ ಇತಿಹಾಸ ಮತ್ತು ಪುರಾತತ್ವ.
5. ಎಂ.ಎ – ಅರ್ಥಶಾಸ್ತ್ರ
6. ಎಂ.ಎ – ಇಂಗ್ಲೀಷ್
7. ಎಂ.ಎ – ಹಿಂದಿ
8. ಎಂ.ಎ – ಇತಿಹಾಸ
9. ಎಂ.ಎ – ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ.
10. ಎಂ.ಎ – ಕನ್ನಡ
11. ಎಂ.ಎ – ರಾಜ್ಯ ಶಾಸ್ತ್ರ
12. ಎಂ.ಎ – ಸಾರ್ವಜನಿಕ ಆಡಳಿತ
13. ಎಂ.ಎ – ಉರ್ದು
14. ಎಂ.ಎ – ಸಮಾಜ ಶಾಸ್ತ್ರ
15. ಎಂ.ಕಾಂ
16. M.Lib.I.Sc
17. M.Sc. (Envirnomental Science)

ಅ) ಪ್ರತಿಯೊಂದು ಕೋರ್ಸಿನ ಅರ್ಹತೆಯನ್ನು Ordinance ಪ್ರಕಾರವೇ ಸಿದ್ಧಪಡಿಸಲಾಗಿದೆ.

ಆ) ವಿವರಣಾ ಪುಸ್ತಕದ ವಿವರಗಳನ್ನು ಸಂಬಂಧ ಪಟ್ಟ ವಿಭಾಗಗಳ ಮುಖ್ಯಸ್ಥರುಗಳು ಅಂದರೆ ವಿಭಾಗದ ಅಧ್ಯಕ್ಷರುಗಳು, ಪ್ರವೇಶಾತಿ ವಿಭಾಗದ ಸಹಾಯಕ ಕುಲಸಚಿವರು, ಡೀನ್ (ಅಧ್ಯಯನ ಕೇಂದ್ರ), ಕುಲಸಚಿವರು (ಪರೀಕ್ಷಾಂಗ) ಮತ್ತು ಡೀನ್ (ಶೈಕ್ಷಣಿಕ) ರವರಿಂದ ದೃಢೀಕರಿಸಲಾಗಿದೆ.

ಇ) ಸದರಿ ವಿವರಣಾ ಪುಸ್ತಕವನ್ನು ಮಾನ್ಯ ಕುಲಪತಿಗಳ ಆದೇಶದಂತೆ ವಿಶ್ವವಿದ್ಯಾನಿಲಯದ **ಅಂತರ್‌ಜಾಲ** (www.ksoumysore.karnataka.govt.in) ದಲ್ಲಿ ಅಪ್ಲೋಡ್ ಮಾಡಲಾಗುವುದು. ಅದರಂತೆ ವಿಧ್ಯಾರ್ಥಿಗಳು ಮುಂದಿನ ಕ್ರಮ ವಹಿಸುವುದು. ಪ್ರವಾಶಾತಿಯನ್ನು ಕೇಂದ್ರ ಕಛೇರಿ ಜೊತೆಗೆ ಪ್ರಾದೇಶಿಕ ಕೇಂದ್ರಗಳಲ್ಲಿ ನಡೆಸಲಾಗುವುದು. 27-08-2018 ರಂದು ಪ್ರವೇಶಾತಿ ಪ್ರಕ್ರಿಯೆಯು ಪ್ರಾರಂಭವಾಗಿ 01-10-2018 ರಂದು ಮುಕ್ತಾಯಗೊಳ್ಳುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಒಳಗೊಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲಾಗಿದ್ದು ಅನುಮೋದನೆ ಕೋರಿದೆ.

**ತೀರ್ಮಾನ: 2018-19ನೇ ಸಾಲಿನ ಪ್ರವೇಶಾತಿಗೆ ಸಂಬಂಧಪಟ್ಟ ವಿವರಣಾ ಪುಸ್ತಕ (ಕನ್ನಡ / ಇಂಗ್ಲೀಷ) ಗಳನ್ನು ಯು.ಜಿ.ಸಿ ನಿಗಧಿಪಡಿಸಿರುವ ಮಾದರಿಯಲ್ಲೆ ಸಿದ್ಧಪಡಿಸಲಾಗಿದ್ದು, ಆ ವಿವರಣಾ ಪುಸ್ತಕಗಳಿಗೆ ಅನುಮೋದನೆ ನೀಡಲಾಯಿತು.**

24/8/18
ಕುಲಸಚಿವರು I/C

ಕುಲಪತಿಗಳು
24/8

**ವಿಷಯ ಸಂಖ್ಯೆ:47.02**

ವಿಷಯ: ಡಾ.ಸೆಲ್ವಪಿಳ್ಳೈ ಅಯ್ಯಂಗಾರ್, ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರನ್ನು ಮಾತೃ ವಿಭಾಗಕ್ಕೆ ನಿಯೋಜಿಸಿರುವ ಬಗ್ಗೆ.

******

ಡಾ. ಸೆಲ್ವಪಿಳ್ಳೈ ಅಯ್ಯಂಗಾರ್, ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಇವರನ್ನು ಉಪಕುಲಸಚಿವ (ಪರೀಕ್ಷಾಂಗ) ಹುದ್ದೆಗೆ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿತ್ತು. ಸದರಿಯವರನ್ನು ಉಪಕುಲಸಚಿವ (ಪರೀಕ್ಷಾಂಗ) ಹುದ್ದೆಯಿಂದ ದಿನಾಂಕ: 17-07-2018 ರಿಂದ ಜಾರಿಗೆ ಬಂದಂತೆ ಬಿಡುಗಡೆಗೊಳಿಸಿ, ಮಾತೃ ಇಲಾಖೆಯಾದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ವರದಿಮಾಡಿಕೊಳ್ಳುವಂತೆ ಸೂಚಿಸಲಾಗಿದ್ದು, ಸದರಿಯವರು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿನ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವಂತೆ ದಿನಾಂಕ:20-08-2018 ರಂದು ಮಾನ್ಯ ಕುಲಪತಿಗಳು ಆದೇಶಿಸಿರುವುದರಿಂದ ಈ ಆದೇಶ ಹೊಡಿಸಲಾಗಿದ್ದು, ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ. ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿಲಾಯಿತು.

**ತೀರ್ಮಾನ: ಸದರಿ ವಿಷಯಕ್ಕೆ ಅನುಸಮರ್ಥನೆ ನೀಡಲಾಯಿತು.**

**ವಿಷಯ ಸಂಖ್ಯೆ : 47:03**

ನಿರ್ವಹಣಾಶಾಸ್ತ್ರ ವಿಭಾಗವು BBA Programme ಅನ್ನು 2013-14 ರಿಂದ ಪ್ರಾರಂಭವಾಗುವಂತೆ ಅನುವು ಮಾಡಿಕೊಳ್ಳಲು ದಿನಾಂಕ: 20-03-2013 ರಂದು ನಡೆದ ಶೈಕ್ಷಣಿಕ ಮಂಡಳಿಯ 23ನೇ ಸಭೆಯಲ್ಲಿ ಅನುಮೋದನೆ ಪಡೆದಿತ್ತು. ಈ ಬಗ್ಗೆ ವಿಭಾಗವು ಸಿದ್ಧಪಾಠಕ್ಕೆ ಸಂಬಂಧಿಸಿದಂತೆ ಯಾವುದೇ ಪೂರ್ವಸಿದ್ಧತೆ ಮಾಡಿಕೊಂಡಿರಲಿಲ್ಲ. ವಿಭಾಗದಲ್ಲಿ ಈ ಹಿಂದೆ MBA Programme ನಡೆಯುತ್ತಿದ್ದು, ಸದ್ಯ UGC ಯಿಂದ ಅದಕ್ಕೆ ಮಾನ್ಯತೆ ದೊರೆತಿಲ್ಲ. ವಿಭಾಗದಲ್ಲಿ ಐದು ಅಧ್ಯಾಪಕರು ಕಾರ್ಯ ನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಸದುದ್ದೇಶದಿಂದ ವಿಶ್ವವಿದ್ಯಾನಿಲಯ 2013-14ರಲ್ಲಿ ಶೈಕ್ಷಣಿಕ ಮಂಡಳಿಯಿಂದ ಅನುಮೋದಿಸಲ್ಪಟ್ಟ BBA Programme ಅನ್ನು ಆರಂಭಿಸಲು ಪೂರ್ವಸಿದ್ಧತೆ ಮಾಡಿಕೊಳ್ಳುವ ಅಗತ್ಯವಿದ್ದು, ಸದರಿ ವಿಷಯವನ್ನು ಶೈಕ್ಷಣಿಕ ಸಭೆಗೆ ವಿಷಯವಾಗಿ ಮಂಡಿಸಿದೆ ಮತ್ತು ಅನುಮೋದನೆ ಕೋರಿದೆ. ಅನುಮೋದಿಸಿದಲ್ಲಿ UGC ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು.

ಮೇಲಿನ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

**ತೀರ್ಮಾನ: ನಿರ್ವಹಣಾಶಾಸ್ತ್ರ ವಿಭಾಗವು ನಡೆಸುವ ಎಂ.ಬಿ.ಎ ಕೋರ್ಸ್‌ಗೆ ಸದ್ಯ ಯು.ಜಿ.ಸಿ ಮಾನ್ಯತೆ ನೀಡದೆ ಇರುವುದರಿಂದ, ಬಿ.ಬಿ.ಎ ಕೋರ್ಸ್‌ಗೆ ಬೇಡಿಕೆ ಇರುವುದನ್ನು ಸಭೆಯು ಗಮನಿಸಿತು. ವಿಭಾಗದಲ್ಲಿರುವ ಅಧ್ಯಾಪಕರುಗಳ ಸೇವೆಯನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಸದರಿ ಕೋರ್ಸ್‌ನ್ನು ಪ್ರಾರಂಭಿಸುವಂತೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲು ತಾತ್ವಿಕ ಅನುಮೋದನೆ ನೀಡಲಾಯಿತು.**

ಕುಲಸಚಿವರು i/c

ಕುಲಪತಿಗಳು

ವಿಷಯ ಸಂಖ್ಯೆ: 47:04

## ವಿಷಯ: ಶಿಕ್ಷಣಕ್ರಮದ ಕೈಪಿಡಿಯ ಅನುಮೋದನೆ

ಕರಾಮುವಿಯು 2018-19ನೇ ಸಾಲಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ವಿವಿಧ ವಿಷಯಗಳಿಗೆ ಪ್ರವೇಶಾತಿ ಪ್ರಕ್ರಿಯೆಗಳನ್ನು ಆರಂಭಿಸುವ ಸಂಬಂಧ, ಯು.ಜಿ.ಸಿ.ಯಿಂದ ಮಾನ್ಯತೆ ದೊರೆತಿರುವ ವಿಷಯಗಳಿಗೆ ಶಿಕ್ಷಣಕ್ರಮದ (ಇಂಗ್ಲಿಷ್ ಆವೃತ್ತಿಯ) ಕೈಪಿಡಿಗಳನ್ನು ಸಿದ್ಧಪಡಿಸಲಾಗಿರುತ್ತದೆ. ಈ ಕೆಳಕಂಡ ಕೈಪಿಡಿಗಳನ್ನು ವಿವಿಯ ಅಧಿಸೂಚನೆ ಸಂಖ್ಯೆ ಕರಾಮುವಿ/ಆರ್.ಪಿ.ಎ/10/2018-19 ದಿ: 28.04.2018ರ ಮೇರೆಗೆ ರಚಿತವಾದ Programme Guide Committee ಯ ಶಿಫಾರಸ್ಸಿನಂತೆ ಸಿದ್ಧಪಡಿಸಲಾಗಿದೆ.

<u>ಸಿದ್ಧಪಡಿಸಿರುವ ಶಿಕ್ಷಣಕ್ರಮದ ಕೈಪಿಡಿಗಳು</u>

1. ಬಿ.ಎ,
2. ಬಿ.ಕಾಂ
3. ಬಿ.ಲಿಬ್.ಐ.ಎಸ್ಸಿ
4. ಎಂ.ಎ (ಕನ್ನಡ)
5. ಎಂ.ಎ (ಇಂಗ್ಲಿಷ್)
6. ಎಂ.ಎ (ಹಿಂದಿ)
7. ಎಂ.ಎ (ಉರ್ದು)
8. ಎಂ.ಎ (ಪ್ರಾಚೀನ ಇತಿಹಾಸ ಮತ್ತು ಪುರಾತತ್ವ)
9. ಎಂ.ಎ (ಅರ್ಥಶಾಸ್ತ್ರ)
10. ಎಂ.ಎ (ಇತಿಹಾಸ)
11. ಎಂ.ಎ (ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ)
12. ಎಂ.ಎ (ರಾಜ್ಯಶಾಸ್ತ್ರ)
13. ಎಂ.ಎ (ಸಾರ್ವಜನಿಕ ಆಡಳಿತ)
14. ಎಂ.ಎ (ಸಮಾಜಶಾಸ್ತ್ರ)
15. ಎಂ.ಕಾಂ
16. ಎಂ.ಲಿಬ್.ಐ.ಎಸ್ಸಿ
17. ಎಂ.ಎಸ್ಸಿ (ಪರಿಸರ ವಿಜ್ಞಾನ)

ಮೇಲಿನ ಶಿಕ್ಷಣಕ್ರಮದ ಕೈಪಿಡಿಗಳ ಅನುಮೊದನೆ ಕೋರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

**ತೀರ್ಮಾನ: ಯು.ಜಿ.ಸಿ ದೂರ ಶಿಕ್ಷಣ ನಿಯಮಾವಳಿ 2017ರ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮಾನ್ಯತೆ ಹೊಂದಿರುವ 17 ಶಿಕ್ಷಣ ಕ್ರಮಗಳಿಗೆ ಪ್ರತ್ಯೇಕವಾಗಿ ಶಿಕ್ಷಣ ಕ್ರಮದ ಕೈಪಿಡಿಯನ್ನು ಸಿದ್ಧಗೊಳಿಸಲಾಗಿದ್ದು, ಇವುಗಳನ್ನು ವಿದ್ಯಾರ್ಥಿಗಳಿಗೆ ರವಾನಿಸುವಂತೆ ಅಗತ್ಯ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ : 47.05

## ವಿಷಯ: MOOCs Courses on SWAYAM Platform ಗೆ ಸಂಬಂಧಪಟ್ಟಂತೆ ಯು.ಜಿ.ಸಿ Website ಗೆ ಲಿಂಕ್ ಮಾಡುವ ಬಗ್ಗೆ.

******

ಹೆಚ್ಚುವರಿ ಕಾರ್ಯದರ್ಶಿಗಳು ಯು.ಜಿ.ಸಿ, ನವದೆಹಲಿ ರವರಿಂದ ಬಂದಿರುವ ಪತ್ರದ ಸಂಖ್ಯೆ F.No 1-8/2017 (SWAYAM Board) ದಿನಾಂಕ: 10–08–2018ರ ಪತ್ರದಲ್ಲಿ ತಿಳಿಸಿರುವಂತೆ SWAYAM Platform ನಲ್ಲಿ MOOCs Course ಗಳನ್ನು ವಿಶ್ವವಿದ್ಯಾನಿಲಯದಲ್ಲಿ ಆರಂಭಿಸಬೇಕಾದರೆ, ವಿಶ್ವವಿದ್ಯಾನಿಲಯದ ಶಾಸನಬದ್ಧ ಮಂಡಳಿಗಳಿಂದ ಅನುಮತಿಯನ್ನು 1ನೇ,ಜುಲೈ–2018ರೊಳಗೆ ಪಡೆಯಬೇಕೆಂದು ತಿಳಿಸಿದೆ. ಅನುಮೋದನೆಯ ನಂತರ MOOCs Course ಗಳನ್ನು ಯು.ಜಿ.ಸಿಯ <u>Htpp://ugcmoocs.inflibnet.ac.in/portal/index.php/ccourse</u> ಇದಕ್ಕೆ ಲಿಂಕ್ ಮಾಡಿ ಎಂದು ತಿಳಿಸಿರುತ್ತಾರೆ.

24/8/18
ಕುಲಸಚಿವರು

24/8
ಕುಲಪತಿಗಳು

ಕರಾಮುವಿ ಗೆ 2015–16 ರಿಂದ ಮಾನ್ಯತೆ ಇಲ್ಲದೆ ಇರುವುದರಿಂದ ಯಾವುದೇ ಪ್ರವೇಶಾತಿ ನಡೆದಿರುವುದಿಲ್ಲ. ಅದಕ್ಕಾಗಿ MOOCs Course ಗಳ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿರಲಿಲ್ಲ. 2018–19ನೇ ಸಾಲಿನಿಂದ 2022–23 ರವರೆಗೆ 17 ಶಿಕ್ಷಣ ಕ್ರಮಗಳಿಗೆ ಮಾನ್ಯತೆ ದೊರೆತ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯವು MOOCs Course ಗಳ ಅಡಿ ಬರುವ ಕೋರ್ಸುಗಳನ್ನು ಸಿದ್ದಪಡಿಸಿಕೊಳ್ಳಬೇಕು ಮತ್ತು ಅವುಗಳನ್ನು MOOCs Course ಗಳನ್ನು ಯು.ಜಿ.ಸಿಯ Htpp://ugcmoocs.inflibnet.ac.in/portal/index.php/course ಲಿಂಕ್ ಮಾಡಬೇಕು ಎಂದು ಸೂಚಿಸಿರುವುದರಿಂದ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಲಾಗಿದೆ.

**ತೀರ್ಮಾನ: 2018-19 ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ದೊರೆತ ಹಿನ್ನೆಲೆಯಲ್ಲಿ MOOCs Course ಗಳನ್ನು ಸಿದ್ದಪಡಿಸಿಕೊಂಡು, ಅವುಗಳ ಪಠ್ಯ ಕ್ರಮದೊಂದಿಗೆ ಯು.ಜಿ.ಸಿಯ Htpp://ugcmoocs.inflibnet.ac.in/portal/index.php/course ಲಿಂಕ್ ಮಾಡಲು ಎಲ್ಲಾ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 47:06**

**ವಿಷಯ:**ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಂತರಿಕ ನಿಬಂಧನೆಗಳ ಸಮಿತಿ ಸಭೆ ನೀಡಿರುವ ಶಿಫಾರಸ್ಸನ್ನು ಚರ್ಚಿಸಿ ಅನುಷ್ಠಾನಗೊಳಿಸುವ ಬಗ್ಗೆ.

******

ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಹೊಂದಿದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸಿನ ವಿದ್ಯಾರ್ಥಿಗಳು ಆಂತರಿಕ ನಿಬಂಧನೆಗಳನ್ನು ಸಲ್ಲಿಸುವ ಪ್ರಕ್ರಿಯೆಗಳಲ್ಲಿ ಉಂಟಾಗುತ್ತಿರುವ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಮಾನ್ಯ ಕುಲಪತಿಗಳ ಆದೇಶದನ್ವಯ ರಚಿತವಾಗಿದ್ದ ಆಂತರಿಕ ನಿಬಂಧನೆಗಳ ಸಮಿತಿಯು ದಿನಾಂಕ: 09.05.2018 ರಂದು ಸಭೆ ಸೇರಿ ಆಂತರಿಕ ನಿಬಂಧನೆಗಳ ಸಲ್ಲಿಕೆ, ಮೌಲ್ಯಮಾಪನ ಹಾಗೂ ಅಂಕಪಟ್ಟಿಗಳಲ್ಲಿ ಆಂತರಿಕ ನಿಬಂಧನೆಗಳ ಅಂಕಗಳು ಸೇರ್ಪಡೆಯಾಗುವ ಸಂದರ್ಭದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಕೆಲವು ನಿರ್ಣಯಗಳನ್ನು ಕೈಗೊಂಡಿರುತ್ತದೆ. ದಿನಾಂಕ: 20.08.2018ರಂದು ಮಾನ್ಯ ಕುಲಪತಿಗಳ ಕೊಠಡಿಯಲ್ಲಿ ಶಾಸನಬದ್ಧ ಅಧಿಕಾರಿಗಳು ಹಾಗೂ ಆಂತರಿಕ ನಿಬಂಧನೆಗಳ ಸಮಿತಿಯ ಸಂಚಾಲಕರು ಒಳಗೊಂಡಂತೆ ಸಭೆ ಸೇರಿ ಆಂತರಿಕ ನಿಬಂಧನೆಗಳ ಸಮಿತಿ ನೀಡಿದ್ದ ನಿರ್ಣಯಗಳ ಶಿಫಾರಸ್ಸಿನ ಬಗ್ಗೆ ಚರ್ಚಿಸಿ ಮಾನ್ಯ ಕುಲಪತಿಗಳ ಒಪ್ಪಿಗೆ ಮೇರೆಗೆ ಕೆಲವು ತೀರ್ಮಾನ ಕೈಗೊಂಡಿರುತ್ತದೆ. ಈ ನಿರ್ಣಯಗಳನ್ನು ಒಳಗೊಂಡಂತೆ ಆಂತರಿಕ ನಿಬಂಧನಗೆಳ ಸಮಿತಿ ಸಭೆಯು ನೀಡಿರುವ ಶಿಫಾರಸ್ಸಿನ ನಿರ್ಣಯಗಳನ್ನು 47ನೇ ಶೈಕ್ಷಣಿಕ ಸಮಿತಿ ಸಭೆಗೆ ಚರ್ಚೆಗಾಗಿ ಹಾಗೂ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ: ಆಂತರಿಕ ನಿಬಂಧನೆಗಳ ಮೌಲ್ಯಮಾಪನದ ಬಗ್ಗೆ ಅಧ್ಯಯನ ಮಾಡಿ ಅಗತ್ಯ ಶಿಫಾರಸ್ಸುಗಳನ್ನು ನೀಡಲು ರಚಿಸಲ್ಪಟ್ಟ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಂತೆ ಕ್ರಮಕೈಗೊಳ್ಳಲು ಅನುಮೋದನೆ ನೀಡಲಾಯಿತು.**

24/8/18
ಕುಲಸಚಿವರು I/c

ಕುಲಪತಿಗಳು 24/8

**ವಿಷಯ ಸಂಖ್ಯೆ:47.07**

ವಿಷಯ: ಸಂದರ್ಶಕ ಪ್ರಾಧ್ಯಾಪಕರನ್ನು ತಾತ್ಕಾಲಿಕವಾಗಿ ನೇಮಕ ಮಾಡುವ ಬಗೆಗೆ:

******

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು, ಮುಕ್ತ ವಿಶ್ವವಿದ್ಯಾನಿಲಯಗಳ ಕಾರ್ಯ ಚಟುವಟಿಕೆಗಳಲ್ಲಿ ಏಕ ರೂಪತೆ ತರುವ ನಿಟ್ಟಿನಲ್ಲಿ ದಿನಾಂಕ:23.06.2017ರ ಅಧಿಸೂಚನೆಯನ್ವಯ ಜಾರಿಗೆ ತಂದ UGC (Open and Distance Learning) Regulations 2017ರನ್ವಯ ಒಂದು ಶೈಕ್ಷಣಿಕ ಕಾರ್ಯಕ್ರಮಕ್ಕೆ ಒಂದು ಸಹ ಪ್ರಾಧ್ಯಾಪಕರು ಮತ್ತು ಎರಡು ಸಹಾಯಕ ಪ್ರಾಧ್ಯಾಪಕರುಗಳು ಇರಬೇಕಿರುತ್ತದೆ. ಅದರಂತೆ ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯುಜಿಸಿಗೆ ಸಲ್ಲಿಸಿದ ಪಿ.ಪಿ.ಆರ್ (Project Proposal Reports) ನಲ್ಲಿ ಹುದ್ದೆಗಳ ಹಂಚಿಕೆ ಕುರಿತು ತಿಳಿಸಿ ಮುಚ್ಚಳಿಕೆ ನೀಡಲಾಗಿರುತ್ತದೆ.

ಇದೇ ಸಂಬಂಧದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ 23 ಹೆಚ್ಚುವರಿ ಸಹ ಪ್ರಾಧ್ಯಾಪಕ ಹುದ್ದೆಗಳು ಮತ್ತು 7 ಪ್ರಾಧ್ಯಾಪಕ ಹುದ್ದೆಗಳು ಸೃಜನೆಯಾಗಿರುತ್ತದೆ.

ವಿಶ್ವವಿದ್ಯಾನಿಲಯಕ್ಕೆ ಯುಜಿಸಿಯಿಂದ 2018-19ನೇ ಸಾಲಿನಿಂದ 2022-2023ನೇ ಸಾಲಿನವರೆಗೆ 17 ಇನ್‌ಹೌಸ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ ದಿನಾಂಕ:09.08.2018ರಲ್ಲಿ ಮಾನ್ಯತೆ ನೀಡಿರುತ್ತದೆ.

ಅಗತ್ಯವಿರುವ ಶೈಕ್ಷಣಿಕ ವಿಭಾಗಗಳಿಗೆ ಸಹ ಪ್ರಾಧ್ಯಾಪಕ ಹುದ್ದೆಗೆ ನೇರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕಿದೆ. ಅಲ್ಲಿಯವರೆಗೂ ಹೆಚ್ಚುವರಿಯಾಗಿ ಸೃಜನೆಯಾದ ಸಹ ಪ್ರಾಧ್ಯಾಪಕ ಹುದ್ದೆಗೆ ಎದುರಾಗಿ ಆಯಾ ವಿಭಾಗಕ್ಕೆ ತಾತ್ಕಾಲಿಕವಾಗಿ ಸಂದರ್ಶಕ ಪ್ರಾಧ್ಯಾಪಕರ (Visitng Professor) ಸೇವೆಯನ್ನು ಪಡೆಯುವ ನಿಟ್ಟಿನಲ್ಲಿ ಆಯಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳನ್ನು ನುರಿತ ನಿವೃತ್ತ ಪ್ರಾಧ್ಯಾಪಕ ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿ, ಕೆಲವು ವಿಭಾಗಗಳು ಮಾತ್ರ ಪಟ್ಟಿಯನ್ನು ಸಲ್ಲಿಸಿರುತ್ತಾರೆ, ಕೆಲವು ವಿಭಾಗಗಳು ಪಟ್ಟಿಯನ್ನು ಸಲ್ಲಿಸಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಅರ್ಹ ಹಾಗೂ ಅಗತ್ಯತೆಗನುಸಾರವಾಗಿ ನಿವೃತ್ತ ಪ್ರಾಧ್ಯಾಪಕರುಗಳನ್ನು ತಾತ್ಕಾಲಿಕವಾಗಿ ಸಂದರ್ಶಕ ಪ್ರಾಧ್ಯಾಪಕರಾಗಿ ಗೌರವ ಸಂಭಾವನೆ ಪಾವತಿಸುವ ಆಧಾರದ ಮೇಲೆ ನೇಮಕ ಮಾಡುವ ಸಂಬಂಧದಲ್ಲಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಮಾನ್ಯ ಸಭೆಯ ಚರ್ಚೆ ಹಾಗೂ ನಿರ್ಣಯ ಕೋರಿ ವಿಷಯ ಮಂಡಿಸಿದೆ.

ಮೇಲಿನ ವಿಷಯವನ್ನು 46ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

**ತೀರ್ಮಾನ: ಯು.ಜಿ.ಸಿ ದೂರ ಶಿಕ್ಷಣ ನಿಯಮದ ಪ್ರಕಾರ ಪ್ರತಿಯೊಂದು ಕೋರ್ಸ್‌ಗೆ 2+1 ರಂತೆ ಅಧ್ಯಾಪಕರುಗಳು ಇರಬೇಕೆಂದು ನಿಬಂಧನೆ ಇರುತ್ತದೆ. ವಿಶ್ವವಿದ್ಯಾನಿಲಯದ ಬಹುತೇಕ ವಿಭಾಗಗಳಲ್ಲಿ ಈ ರೀತಿ ಇಲ್ಲದೆ ಇರುವುದನ್ನು ಶೈಕ್ಷಣಿಕ ಮಂಡಳಿ ಗಮನಿಸಿತು. ಇದನ್ನು ಸರಿದೂಗಿಸಲು ವಿವಿಧ ವಿಭಾಗಗಳು ಸಲ್ಲಿಸಿರುವ ತಜ್ಞರ ಪಟ್ಟಿಯನ್ನು ಪರಾಮರ್ಶಿಸಿ ವಿ.ವಿ. ಕಾಯ್ದೆ 1994 ಅಧ್ಯಾಯ-II ಸೆಕ್ಷನ್ 5(22) ರ ಪ್ರಕಾರ ಅನುಮೋದಿಸಿ, ವ್ಯವಸ್ಥಾಪನಾ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ಮಾಡಲಾಯಿತು.**

**ವಿಷಯ ಸಂಖ್ಯೆ: 47.08**

ವಿಷಯ : ವಿವಿ ನಿಲಯದ 'ಕಲಿಕಾರ್ಥಿ ಸಹಾಯ ಕೇಂದ್ರ' (Learner Support Center) / ಅಧ್ಯಯನ ಕೇಂದ್ರ (Study Center) ದ ಪರಿಷ್ಕೃತ ಪಟ್ಟಿಗೆ ಅನುಮೋದನೆ ಪಡೆಯುವ ಬಗೆಗೆ.

*****

2018-19ನೇ ಸಾಲಿನಿಂದ ಆರಂಭಿಸಲಿರುವ ಶಿಕ್ಷಣಕ್ರಮಗಳ ಶೈಕ್ಷಣಿಗಳ ಚಟುವಟಿಕೆಗಳ ಪೂರೈಕೆಗಾಗಿ ಒಟ್ಟು 75 'ಕಲಿಕಾರ್ಥಿ ಸಹಾಯ ಕೇಂದ್ರ' ಗಳನ್ನು (65 ಸಾಮಾನ್ಯ ಕಲಿಕಾರ್ಥಿ ಸಹಾಯ ಕೇಂದ್ರಗಳು ಮತ್ತು 10 ಬಿ.ಎಡ್ ಅಧ್ಯಯನ ಕೇಂದ್ರಗಳು) ಗುರುತಿಸಿ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲಾಗಿತ್ತು.ಕೆಲವು ಸಾಮಾನ್ಯ ಕಲಿಕಾರ್ಥಿ ಸಹಾಯ ಕೇಂದ್ರಗಳವರು ಕಾರಣಾಂತರಗಳಿಂದ ಅಧ್ಯಯನ ಕೇಂದ್ರವಾಗಿ ಮುಂದುವರಿಯಲು ಸಾಧ್ಯವಾದೆಂದು ತಿಳಿಸಿರುವ ಹಿನ್ನೆಲೆಯಲ್ಲಿ

ಕುಲಸಚಿವರು i/c 24/8      ಕುಲಪತಿಗಳು 24/8

ಅಂತಹ ಕೇಂದ್ರಗಳನ್ನು ಹೊರತುಪಡಿಸಿ 'ಪರಿಷ್ಕೃತ ಪಟ್ಟಿ'ಯನ್ನು ಸಿದ್ಧಪಡಿಸಿ ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿರುವ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

**ತೀರ್ಮಾನ: ಡೀನ್ (ಅಧ್ಯಯನ ಕೇಂದ್ರ )ರವರಿಂದ ಸಲ್ಲಿಸಲ್ಪಟ್ಟ 75 ಅಧ್ಯಯನ ಕೇಂದ್ರಗಳ ವಿವರಗಳಲ್ಲಿ ಕೆಲವು ಕೇಂದ್ರಗಳು ನಿರ್ವಹಿಸಲು ಮುಂದೆ ಬಾರದ್ದರಿಂದ, ಉಳಿದ 67 ಕೇಂದ್ರಗಳ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ:47.09**

School of Social Science & School of Law Department ನಿರ್ದೇಶಕರಾಗಿದ್ದ ಪ್ರೊ.ಕೆ.ಜಿ.ಸುರೇಶ್ ರವರು ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ)ರವರಾಗಿ ನೇಮಕಗೊಂಡಿದ್ದು, ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಸದರಿಯವರ ತೆರವಾದ ಸ್ಥಾನಕ್ಕೆ ನಿರ್ದೇಶಕರನ್ನು ನೇಮಿಸಲು ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

**ತೀರ್ಮಾನ: ಪ್ರೊ.ಕೆ.ಜಿ ಸುರೇಶ್ ರವರನ್ನು ತುಮಕೂರು ವಿಶ್ವವಿದ್ಯಾನಿಲಯಲ್ಲಿ ಕುಲಸಚಿವ (ಮೌಲ್ಯಮಾಪನ) ರಾಗಿ ನಿಯೋಜಿಸಲ್ಪಟ್ಟಿರುವುದರಿಂದ ತೆರವಾದ ಸ್ಕೂಲ್ ನಿರ್ದೇಶಕರ ಸ್ಥಾನಕ್ಕೆ ಬದಲಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳುವಂತೆ ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 47:10**

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2012-13ನೇ ಸಾಲಿನಲ್ಲಿ ಪ್ರವೇಶಾತಿ ಹೊಂದಿ ಪರೀಕ್ಷೆ ತೆಗೆದುಕೊಳ್ಳದೆ ಇರುವ ಹಾಗೂ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಸಂಬಂಧ ಹಾಗೂ 2012-13ನೇ ಸಾಲಿನ ಮತ್ತು ಅದರ ಹಿಂದಿನ ಸಾಲುಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಇನ್‌ಹೌಸ್ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ನಡೆಸುವ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2012-13 ಹಾಗೂ ಹಿಂದಿನ ಸಾಲುಗಳಲ್ಲಿ ಪ್ರವೇಶಾತಿ ಪಡೆದು (ಇನ್‌ಹೌಸ್) ಮೇ/ಜೂನ್ 2014ರ ವರೆಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪಡೆದು 05.03.2015ರಲ್ಲಿ ವಾರ್ಷಿಕ ಘಟಿಕೋತ್ಸವವನ್ನು ಜರುಗಿಸಲಾಗಿರುತ್ತದೆ.

2012-13ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ ವಿದ್ಯಾರ್ಥಿಗಳಿಗೆ 2016 ರಲ್ಲಿ ವಾರ್ಷಿಕಘಟಿಕೋತ್ಸವವನ್ನು ಜರುಗಿಸಿ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗಿತ್ತು, ಈ ಸಂಬಂಧವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ (ಅನುಬಂಧ 'ಅ'). ಯುಜಿಸಿಯು 2013-14ನೇ ಸಾಲಿನಿಂದ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ರದ್ದುಗೊಳಿಸಿದ್ದರಿಂದ 2016ರಲ್ಲಿ 16ನೇ ವಾರ್ಷಿಕಘಟಿಕೋತ್ಸವವು ಜರುಗಿರುವುದಿಲ್ಲ.

2012-13 ಮತ್ತು ಅದಕ್ಕಿಂತಲು ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ಕೆಲವು ಸ್ನಾತಕೋತ್ತರ ವಿದ್ಯಾರ್ಥಿಗಳು ಪದವಿಯನ್ನು 2014-15ನೇ ಸಾಲಿನಲ್ಲಿ ಪೂರ್ಣಗೊಳಿಸಿರುತ್ತಾರೆ. ಈ ಸಾಲಿನಲ್ಲಿ ಪ್ರವೇಶಾತಿ ಹೊಂದಿದ್ದ ವಿದ್ಯಾರ್ಥಿಗಳಿಗೆ ಯುಜಿಸಿಯ ಮಾನ್ಯತೆ ಇದ್ದರೂ ಸಹ ವಿಶ್ವವಿದ್ಯಾನಿಲಯದಲ್ಲಿ 16ನೇ ವಾರ್ಷಿಕ ಘಟಿಕೋತ್ಸವ ಜರುಗದೆ ಇರುವ ಕಾರಣ ಸದರಿ ಸಾಲಿನ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿರುವುದಿಲ್ಲ.

ಕುಲಸಚಿವರು I/c | ಕುಲಪತಿಗಳು 24/8

ಕರ್ನಾಟಕದ ಉಚ್ಚ ನ್ಯಾಯಾಲಯದ ರಿಟ್ ಪಿಟಿಶನ್ ನಂ: 34255/2016 (ಜಿ.ಎಂ.ಆರ್.ಇ.ಎಸ್) ರ ದಿನಾಂಕ 27.06.2016ರ ತೀರ್ಪಿನಲ್ಲಿ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2012-13ನೇ ಸಾಲಿನವರೆಗೆ ಪ್ರವೇಶಾತಿ ಹೊಂದಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಪದವಿಗಳಿಗೆ ಮಾನ್ಯತೆ ಇರುವ ಬಗ್ಗೆ ಸ್ಪಷ್ಟೀಕರಣ ಪಡೆದು, ಸದರಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ವಿತರಿಸಲು ಹಾಗೂ ಅವರುಗಳು ಸರ್ಕಾರಿ ಹುದ್ದೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಉಚ್ಚನ್ಯಾಯಾಲಯವು ತೀರ್ಮಾನಿಸಿರುತ್ತದೆ. (ಅನುಬಂಧ-ಆ)

ಕೇಂದ್ರದ ಮಾನವ ಸಂಪನ್ಮೂಲ ಸಚಿವಾಲಯ ನವದೆಹಲಿಯ ಅಧೀನ ಕಾರ್ಯದರ್ಶಿ, ಭಾರತ ಸರ್ಕಾರ ಇವರು ಹೊರಡಿಸಿರುವ ದಿನಾಂಕ: 06.12.2012ರ ಆಫೀಸ್ ಮೆಮೋರೆಂಡಂ ನಲ್ಲಿ ದಿನಾಂಕ: 31.05.2013ರೊಳಗೆ ಪ್ರವೇಶಾತಿ ಹೊಂದಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ಪದವಿಗಳಿಗೆ ಮಾನ್ಯತೆ ಇರುವ ಸಂಬಂಧ ಭಾರತ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಹೊಂದಲು ಅವಕಾಶ ಇರುತ್ತದೆ. (ಅನುಬಂಧ-ಇ)

ಮೇಲ್ಕಂಡ ವಿವರಗಳ ಹಿನ್ನಲೆಯಲ್ಲಿ 2012-13ನೇ ಶೈಕ್ಷಣಿಕ ವರ್ಷದ ಮತ್ತು ಅದಕ್ಕಿಂತ ಹಿಂದಿನ ಸಾಲುಗಳಲ್ಲಿ ಸ್ನಾತಕ ಪದವಿಗೆ ಪ್ರವೇಶಾತಿ ಹೊಂದಿ 2015ರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ನಡೆಸುವ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಸಂಬಂಧದ ವಿಷಯವನ್ನು 47ನೇ ಶೈಕ್ಷಣಿಕ ಮಂಡಳಿಯ ಸಭೆಗೆ ಮಂಡಿಸಲು ಅನುಮೋದನೆಯ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ: 2012-13ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಇನ್ -ಹೌಸ್ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲು ಅನುವು ಆಗುವಂತೆ ಅಗತ್ಯ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 47:11**

**ವಿಷಯ**: ಶಾಕೀರ ಬೇಗಂ ಎಂಬ ವಿದ್ಯಾರ್ಥಿನಿಯ ಬಿ.ಎ ಪದವಿಯ ಬಗೆಗೆ.

******

ಶಾಕೀರ ಬೇಗಂ ಈ ವಿದ್ಯಾರ್ಥಿನಿ 2010-11ನೇ ಸಾಲಿನಲ್ಲಿ ಪ್ರಥಮ ಬಿ.ಎ. ಪದವಿಗೆ ಪ್ರವೇಶಾತಿ ಪಡೆದಿದ್ದು, ಸದರಿ ವಿದ್ಯಾರ್ಥಿನಿಯ ನೋಂದಣಿ ಸಂಖ್ಯೆ 1006100311 ಆಗಿರುತ್ತದೆ. ಈ ವಿದ್ಯಾರ್ಥಿನಿ ಪ್ರಥಮ ಬಿ.ಎ. ವ್ಯಾಸಂಗಕ್ಕೆ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ ವಿಷಯಗಳನ್ನು ಐಚ್ಛಿಕ ವಿಷಯಗಳಾಗಿ ಆಯ್ಕೆ ಮಾಡಿಕೊಂಡು ವ್ಯಾಸಂಗ ಮಾಡಿರುತ್ತಾರೆ.

ಆದರೆ ದ್ವಿತೀಯ ಬಿ.ಎ. ವ್ಯಾಸಂಗದ ಸಂದರ್ಭದಲ್ಲಿ ಅರ್ಥಶಾಸ್ತ್ರಕ್ಕೆ ಬದಲಾಗಿ ಇಂಗ್ಲಿಷ್ ವಿಷಯವನ್ನು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ.

ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ವಿದ್ಯಾರ್ಥಿನಿಯು ಒಂದು ಐಚ್ಛಿಕ ವಿಷಯಕ್ಕೆ ಬದಲಾಗಿ ಮತ್ತೊಂದು ಐಚ್ಛಿಕ ವಿಷಯವನ್ನು ದ್ವಿತೀಯ ವರ್ಷದಲ್ಲಿ ಬದಲಾವಣೆ ಮಾಡಿಕೊಂಡರೆ ಆ ವಿಷಯವನ್ನು ಕುರಿತು ಮೊದಲ ವರ್ಷದಿಂದಲೇ ಅಧ್ಯಯನ ಮಾಡಿ ತೇರ್ಗಡೆ ಹೊಂದಬೇಕಾಗಿರುತ್ತದೆ ಹಾಗೂ ಆ ಶೈಕ್ಷಣಿಕ ಸಾಲಿನಲ್ಲಿಯೇ ವಿಷಯ ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆದು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ, ಈ ಹಿಂದೆ ಪಡೆದಿರುವ ಅಂಕಪಟ್ಟಿಗಳನ್ನು ವಿವಿನಿಲಯಕ್ಕೆ ಹಿಂದಿರುಗಿಸಬೇಕಾಗಿರುತ್ತದೆ.

ಆದರೆ ಶಾಕೀರ ಬೇಗಂ ಎಂಬ ವಿದ್ಯಾರ್ಥಿನಿ ಈ ನಿಯಮವನ್ನು ಪಾಲಿಸಿಯೇ ಇರುವುದಿಲ್ಲ. ಅಂದರೆ ಬದಲಾವಣೆ ಮಾಡಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ಮೊದಲ ವರ್ಷದ ಇಂಗ್ಲಿಷ್ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಅಧ್ಯಯನ ಮಾಡಿ ತೇರ್ಗಡೆ ಹೊಂದಿರುವುದಿಲ್ಲ. ಬದಲಾಗಿ ಅರ್ಥಶಾಸ್ತ್ರದ ವಿಷಯದ ಮೇಲೆಯೇ 2013ರಲ್ಲಿ ಜರುಗಿದ ಘಟಿಕೋತ್ಸವದಲ್ಲಿ ಹೆಸರು ಸೇರ್ಪಡೆಗೊಂಡು ಪದವಿ ಪ್ರಮಾಣ ಪತ್ರವನ್ನು 2014 ರಲ್ಲಿ ಪಡೆದಿರುತ್ತಾರೆ.

ಕುಲಸಚಿವರು	ಕುಲಪತಿಗಳು

ಮುಂದುವರೆದು, ಪದವಿ ಪ್ರಮಾಣ ಪತ್ರವನ್ನು ಪಡೆದ ಬಳಿಕ 2017ರಲ್ಲಿ ಇವರು ಪುನಃ ಸ್ವಯಿಚ್ಛೆಯಿಂದ ಇಂಗ್ಲಿಷ್ ಐಚ್ಛಿಕ ವಿಷಯಕ್ಕೆ ಪರೀಕ್ಷೆ ಬರೆದು ತೇರ್ಗಡೆ ಹೊಂದಿರುವ ಸಂಗತಿ ಕಂಡುಬಂದಿರುತ್ತದೆ.

ಒಮ್ಮೆ ತೇರ್ಗಡೆಯಾಗಿ ಪದವಿ ಪ್ರಮಾಣ ಪತ್ರ ಪಡೆದ ವಿದ್ಯಾರ್ಥಿನಿ ವಿವಿನಿಲಯದ ಅನುಮತಿ ಪಡೆಯದೆ ಸ್ವ ಇಚ್ಛೆಯಿಂದ ಪರೀಕ್ಷೆ ಬರೆದುಗೊಂದಲ ಉಂಟುಮಾಡಿರುತ್ತಾರೆ. ಅಲ್ಲದೆ, ಇವರ ಪದವಿ ಸಂಪೂರ್ಣವಾಗಿ ಮುಕ್ತಾಯಗೊಳ್ಳದೆ ಇರುವುದರಿಂದ 2017ರಲ್ಲಿ ಇಂಗ್ಲಿಷ್ ವಿಷಯಕ್ಕೆ ಪುನಃ ಸದರಿ ವಿದ್ಯಾರ್ಥಿನಿ ಸ್ವ ಇಚ್ಛೆಯಿಂದ ಪರೀಕ್ಷೆ ಬರೆದಿರುವುದರಿಂದಇವರಿಗೆ ಈ ಹಿಂದೆ ವಿತರಿಸಲಾಗಿದ್ದ ಪದವಿ ಪ್ರಮಾಣ ಪತ್ರದ ನೈಜತೆಯ ಪ್ರಶ್ನೆ ಎದುರಾಗಿರುತ್ತದೆ.ಆದ್ದರಿಂದ ಸದರಿ ಪದವಿ ಪ್ರಮಾಣ ಪತ್ರವನ್ನು ಹಿಂಪಡೆದು, ಮುಟ್ಟುಗೋಲು ಹಾಕಿಕೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರಾಮುವಿ ರಚಿಸಿಕೊಂಡಿರುವ ಪರಿನಿಯಮKSOU (Withdrawal of Degree or Diploma) Statute2011ರ ಕ್ಲಾಸ್ 2ರಲ್ಲಿ "The Board of Management may on the recommendation of the Vice – Chancellor, withdraw any distinction, degree, diploma or privilege conferred on or granted to any person, resolution passed by the Board of Management by a majority of not less than two thirds the members present at the meeting, if such a person has been found to have obtained such degree or diploma or certificate fraudulently or has obtained admission through false indicates of eligibility" ಮತ್ತು 3ರಲ್ಲಿ "A copy of the resolution passed by the Board of Management shall be immediately to the person concerned and an opportunity shall be given to him to show cause against proposed to be taken" ಎಂಬ ಅಂಶಗಳು ಕ್ಲಾಸ್ 2 ಮತ್ತು 3ರಲ್ಲಿ ದತ್ತವಾಗಿರುವ ಅಧಿಕಾರದನ್ವಯ ಕ್ರಮವಹಿಸುವ ಬಗ್ಗೆ 47ನೇ ಶೈಕ್ಷಣಿಕ ಮಂಡಳ ಸಭೆಗೆ ವಿಷಯವನ್ನು ಮಂಡಿಸಿ ಅನುಮೋದನೆ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ: ಶಾಕೀರ ಬೇಗಂ ಎಂಬ ವಿದ್ಯಾರ್ಥಿನಿಯು ಪುನ: ಸ್ವ-ಇಚ್ಛೆಯಿಂದ ಇಂಗ್ಲೀಷ್ ಐಚ್ಛಿಕ್ ವಿಷಯದಲ್ಲಿ ಪರೀಕ್ಷೆ ಬರೆದು ತೇರ್ಗಡೆಹೊಂದಿರುವದರಿಂದ ಗೊಂದಲ ಉಂಟಾಗಿರುತ್ತದೆ. ಅದನ್ನು ಪರಿಹರಿಸಲು ಅವರ ಅಂಕಪಟ್ಟಿ ಮತ್ತು ಪದವಿಯನ್ನು ಹಿಂಪಡೆದುಕೊಳ್ಳುವಂತೆ ತೀರ್ಮಾನಿಸಲಾಯಿತು.**

<u>ವಿಷಯ ಸಂಖ್ಯೆ</u>: 47:12

<u>ವಿಷಯ</u> : ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಮಂಜೂರು ಮಾಡಿರುವ ಬಗ್ಗೆ.

****

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (ಯು.ಜಿ.ಸಿ.) ಸಾರ್ವಜನಿಕ ತಿಳುವಳಿಕೆಯಲ್ಲಿ ದಿನಾಂಕ : 16-06-2015 ರಲ್ಲಿ 2013-14ನೇ ಸಾಲಿನಿಂದ ಈ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಹಿಂಪಡೆದಿರುವುದಾಗಿ ಪ್ರಕಟಿಸಿದ ಪ್ರಯುಕ್ತ ಈ ವಿಶ್ವವಿದ್ಯಾನಿಲಯವು 2016-17ನೇ ಶೈಕ್ಷಣಿಕ ಸಾಲಿನ ಮಾನ್ಯತೆಗೆ ಸಂಬಂಧಿಸಿದಂತೆ ಯು.ಜಿ.ಸಿ. ಪರಿಣಿತ ಸಮಿತಿಯವರು ಗಮನಿಸಿದ್ದ ಅಂಶಗಳಿಗೆ ಈ ವಿಶ್ವವಿದ್ಯಾನಿಲಯವು ದಿನಾಂಕ : 22.04.2016ರಂದು ಅನುಪಾಲನಾ ವರದಿಯನ್ನು ಸಲ್ಲಿಸಿತ್ತು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕುಲಪತಿಗಳು ಹಾಗೂ ಇತರೆ ಅಧಿಕಾರಿಗಳು ಯು.ಜಿ.ಸಿ.ಗೆ ಹಲವಾರು ಭಾರಿ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು ವಿಳಂಬವಿಲ್ಲದೇ ಸಲ್ಲಿಸಿದ್ದರು. ರಾಜ್ಯ ಸರ್ಕಾರವೂ ಸಹ ಮಾನ್ಯತೆ ನೀಡುವಂತೆ ಕೋರಿ ಯು.ಜಿ.ಸಿ.ಗೆ ಅನೇಕ ಭಾರಿ ಶಿಫಾರಸ್ಸು ಮಾಡಿರುತ್ತದೆ. ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದೀಜಿಯವರಿಗೆ ಪತ್ರ ಬರೆದು ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿದ್ದರು. ಯು.ಜಿ.ಸಿ.ಯು ದಿನಾಂಕ : 06.02.2017ರಂದು ಆಯೋಜಿಸಿದ್ದ ಸಮಕ್ಷಮ ಸಭೆಗೆ ಕುಲಪತಿಗಳು ಮತ್ತು ಇತರೆ ಅಧಿಕಾರಿಗಳು ಸಂಪೂರ್ಣ ದಾಖಲೆಗಳೊಂದಿಗೆ ಹಾಜರಾಗಿ ಎಲ್ಲಾ

ಕುಲಸಚಿವರು I/c ಕುಲಪತಿಗಳು

ಪ್ರಶ್ನೆಗಳಿಗೆ ಸಮರ್ಪಕ ಸ್ಪಷ್ಟೀಕರಣದೊಂದಿಗೆ ಅಪೇಕ್ಷಿತ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಿದ್ದರು. ಈ ಸಂಬಂಧವಾಗಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ಹಾಗೂ ಯು.ಜಿ.ಸಿ.ಯೊಂದಿಗೆ ಸಾವಿರಾರು ಪುಟಗಳಷ್ಟು ಪತ್ರ ವ್ಯವಹಾರವನ್ನು ನಿರಂತರವಾಗಿ ಮಾಡಲಾಗಿತ್ತು. ಈ ಬಗ್ಗೆ ಕರ್ನಾಟಕ ಸರ್ಕಾರದ ಶಿಕ್ಷಣ ಸಚಿವರು, ಕರ್ನಾಟಕದ ಸಂಸದರು ಹಾಗೂ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಸಚಿವರನ್ನು ಹಲವಾರು ಬಾರಿ ಭೇಟಿ ಮಾಡಲಾಯಿತು.

ಮುಂದುವರೆದು, 2017-18ನೇ ಶೈಕ್ಷಣಿಕ ವರ್ಷಕ್ಕೆ ಮಾನ್ಯತೆಯನ್ನು ನೀಡುವಂತೆ ಕೋರಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿತ್ತು. ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿದ ನ್ಯಾಯಾಲಯವು ದಿನಾಂಕ : 12.12.2017ರಂದು ತೀರ್ಪನ್ನು ನೀಡಿ 2017-18ನೇ ಸಾಲಿಗೆ ಮಾನ್ಯತೆಯನ್ನು ನೀಡುವಂತೆ ಯು.ಜಿ.ಸಿ.ಗೆ ನಿರ್ದೇಶನವನ್ನು ನೀಡಿತ್ತು. ಯು.ಜಿ.ಸಿ.ಯು ಮಾನ್ಯ ನ್ಯಾಯಾಲಯದ ತೀರ್ಪಿನಂತೆ ಮಾನ್ಯತೆಯನ್ನು ನೀಡದೆ ಇದ್ದ ಪ್ರಯುಕ್ತ ಈ ವಿಶ್ವವಿದ್ಯಾನಿಲಯವು ನ್ಯಾಯಾಲಯದ ನಿಂದನಾ ಅರ್ಜಿಯನ್ನು ಸಲ್ಲಿಸಿತ್ತು. ಆದರೆ, ಯು.ಜಿ.ಸಿ.ಯು ಮಾನ್ಯ ನ್ಯಾಯಾಲಯದ ದಿನಾಂಕ: 12.12.2017ರ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತದೆ. ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಯು.ಜಿ.ಸಿ.ಯು 2017ರ ನಿಯಮಾವಳಿಗಳನ್ನು ಪ್ರಕಟಿಸಿದ ನಂತರ 2018-19ನೇ ಸಾಲಿನಿಂದ ಮಾನ್ಯತೆಯನ್ನು ಪಡೆಯಲು ಈ ವಿಶ್ವವಿದ್ಯಾನಿಲಯವು ಕೂಲಂಕಷವಾದ ಪ್ರಸ್ತಾವನೆಯನ್ನು ಸಮರ್ಪಕವಾದ ವಿವರಗಳೊಂದಿಗೆ ಆನ್‌ಲೈನ್ ಮೂಲಕ ಮತ್ತು ಖುದ್ದಾಗಿ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿತು. ಯು.ಜಿ.ಸಿ.ಯ ನಿರ್ದೇಶನದಂತೆ ದಿನಾಂಕ: 05.07.2018ರಂದು ನಡೆದ ಸಮಕ್ಷಮ ಸಭೆಗೆ ಈ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಹಾಗೂ ಇತರೆ ಅಧಿಕಾರಿಗಳು '32' ಅಂತರ್‌ಗೃಹ ತಾಂತ್ರಿಕೇತರ ಕಾರ್ಯಕ್ರಮಗಳನ್ನು (in-house non-technical programmes) ಪ್ರಾರಂಭಿಸುವ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ದಾಖಲೆಗಳೊಂದಿಗೆ ಹಾಜರಿದ್ದರು. ಈ ವಿಶ್ವವಿದ್ಯಾನಿಲಯದ ಪ್ರಸ್ತಾವನೆಯನ್ನು ಪರಿಗಣಿಸಿದ ಯು.ಜಿ.ಸಿ.ಯು 2018-19ನೇ ಶೈಕ್ಷಣಿಕ ಸಾಲಿನಿಂದ 2022-23ರವರೆಗೆ ಐದು ವರ್ಷಗಳ ಅವಧಿಗೆ ಮಾನ್ಯತೆಯನ್ನು ಮಂಜೂರು ಮಾಡಿದ್ದು, ಕೆಳಕಂಡ '17' ಅಂತರ್‌ಗೃಹ ತಾಂತ್ರಿಕೇತರ ಕಾರ್ಯಕ್ರಮಗಳನ್ನು (in-house non-technical programmes) ಪ್ರಾರಂಭಿಸಲು ಅನುಮತಿ ನೀಡಿರುತ್ತದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ಹೆಸರು | ಕ್ರಮ ಸಂಖ್ಯೆ | ಕಾರ್ಯಕ್ರಮಗಳ ಹೆಸರು |
|---|---|---|---|
| 01. | ಬಿ.ಎ. | 10. | ಎಂ.ಎ. (ಅರ್ಥಶಾಸ್ತ್ರ) |
| 02. | ಬಿ.ಕಾಂ. | 11. | ಎಂ.ಎ. (ರಾಜ್ಯಶಾಸ್ತ್ರ) |
| 03. | ಬಿ.ಎಲ್.ಐ.ಎಸ್ಸಿ. | 12. | ಎಂ.ಎ. (ಸಾರ್ವಜನಿಕ ಆಡಳಿತ) |
| 04. | ಎಂ.ಎ. (ಕನ್ನಡ) | 13. | ಎಂ.ಎ. (ಸಮಾಜಶಾಸ್ತ್ರ) |
| 05. | ಎಂ.ಎ. (ಇಂಗ್ಲಿಷ್) | 14. | ಎಂ.ಎ. (ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ) |
| 06. | ಎಂ.ಎ. (ಹಿಂದಿ) | 15. | ಎಂ.ಕಾಂ. |
| 07. | ಎಂ.ಎ. (ಉರ್ದು) | 16. | ಎಂ.ಎಲ್.ಐ.ಎಸ್ಸಿ. |
| 08. | ಎಂ.ಎ. (ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ) | 17. | ಎಂ.ಎಸ್ಸಿ. (ಪರಿಸರ ವಿಜ್ಞಾನ) |
| 09. | ಎಂ.ಎ. (ಇತಿಹಾಸ) | | |

ಕುಲಸಚಿವರು

ಕುಲಪತಿಗಳು

ಮುಂದುವರೆದು, ಯು.ಜಿ.ಸಿ.ಯು ಕೆಳಕಂಡ '15' ಅಂತರ್‌ಗೃಹ ತಾಂತ್ರಿಕೇತರ ಕಾರ್ಯಕ್ರಮಗಳನ್ನು (in-house non-technical programmes) ಪ್ರಾರಂಭಿಸಲು ನಿಯಂತ್ರಕ ಸಂಸ್ಥೆಗಳ (Regulatory Bodies) ಪೂರ್ವಾನುಮತಿ ಮತ್ತು ಅಧ್ಯಾಪಕರ ಕೊರತೆಯ ಕಾರಣಗಳಿಂದಾಗಿ ಅನುಮತಿಯನ್ನು ನೀಡಿರುವುದಿಲ್ಲ.

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ಹೆಸರು | |
|---|---|---|
| 01. | ಬಿ.ಇಡಿ. | ಸಂಬಂಧಪಟ್ಟ ನಿಯಂತ್ರಕ ಸಂಸ್ಥೆಗಳ ಪೂರ್ವಾನುಮತಿಯ ಅಗತ್ಯವಿರುವ ಕಾರಣದಿಂದಾಗಿ ಮನ್ಯತೆ ನೀಡಿರುವುದಿಲ್ಲ. |
| 02. | ಎಂ.ಬಿ.ಎ. | |
| 03. | ಎಲ್ ಎಲ್ ಎಮ್. | |
| 04. | ಎಂ.ಎ. (ಸಂಸ್ಕೃತ) | |
| 05. | ಎಂ.ಎಸ್ಸಿ. (ಜೀವ ರಸಾಯನಶಾಸ್ತ್ರ) | ಅಧ್ಯಾಪಕರ ಕೊರತೆಯ ಕಾರಣದಿಂದಾಗಿ ಮಾನ್ಯತೆ ನೀಡಿರುವುದಿಲ್ಲ |
| 06. | ಎಂ.ಎಸ್ಸಿ. (ಜೈವಿಕ ತಂತ್ರಜ್ಞಾನ) | |
| 07. | ಎಂ.ಎಸ್ಸಿ. (ರಸಾಯನಶಾಸ್ತ್ರ) | |
| 08. | ಎಂ.ಎಸ್ಸಿ. (ಕ್ಲಿನಿಕಲ್ ನ್ಯೂಟ್ರಿಷನ್ & ಡಯಟಿಟಿಕ್ಸ್) | |
| 09. | ಎಂ.ಎಸ್ಸಿ. (ಗಣಕ ವಿಜ್ಞಾನ) | |
| 10. | ಎಂ.ಎಸ್ಸಿ. (ಭೂಗೋಳಶಾಸ್ತ್ರ) | |
| 11. | ಎಂ.ಎಸ್ಸಿ. (ಮಾಹಿತಿ ವಿಜ್ಞಾನ) | |
| 12. | ಎಂ.ಎಸ್ಸಿ. (ಗಣಿತಶಾಸ್ತ್ರ) | |
| 13. | ಎಂ.ಎಸ್ಸಿ. (ಸೂಕ್ಷ್ಮ ಜೀವಶಾಸ್ತ್ರ) | |
| 14. | ಎಂ.ಎಸ್ಸಿ. (ಭೌತಶಾಸ್ತ್ರ) | |
| 15. | ಎಂ.ಎಸ್ಸಿ. (ಮನೋವಿಜ್ಞಾನ) | |

ಯು.ಜಿ.ಸಿ.ಯು ಮಾನ್ಯತೆ ಬಾಕಿ ಇರುವ '15' ಕಾರ್ಯಕ್ರಮಗಳಿಗೆ ಮಾನ್ಯತೆ ಪಡೆಯಲು ಅಗತ್ಯ ದಾಖಲಾತಿಗಳೊಂದಿಗೆ ಮೇಲ್ಮನವಿ ಸಲ್ಲಿಸಲು ಸದರಿ ಪತ್ರ ದಿನಾಂಕ: 14-08-2018 ರಿಂದ 30 ದಿನಗಳ ಕಾಲಾವಕಾಶ ನೀಡಿರುತ್ತದೆ. ಅದರಂತೆ, ಈ ವಿಶ್ವವಿದ್ಯಾನಿಲಯವು ಶೀಘ್ರವಾಗಿ ಸದರಿ '15' ಕಾರ್ಯಕ್ರಮಗಳಿಗೆ ಮಾನ್ಯತೆಯನ್ನು ಪಡೆಯಲು ಸಮರ್ಥನೆಯೊಂದಿಗೆ ಅಗತ್ಯ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಸಲ್ಲಿಸಲಾಗುವುದು.

ಈ ಹಿನ್ನೆಲೆಯಲ್ಲಿ, ಪ್ರಸ್ತುತ, ಯು.ಜಿ.ಸಿ.ಯು ಮಂಜೂರು ಮಾಡಿರುವ '17' ಅಂತರ್‌ಗೃಹ ತಾಂತ್ರಿಕೇತರ ಕಾರ್ಯಕ್ರಮಗಳನ್ನು (in-house non-technical programmes) ಪ್ರವೇಶಾತಿಗಳನ್ನು ಪ್ರಾರಂಭಿಸಲು, ಸಿದ್ಧಪಾಠಗಳ ಬಗ್ಗೆ ಹಾಗೂ ತತ್ಸಂಬಂದಧ ಮುಂದುವರೆದು 2013-14ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಇದ್ದಾಗ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿದ್ದು, ಮುಂದಿನ ವರ್ಷಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಅಂತಹ ವಿದ್ಯಾರ್ಥಿಗಳು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಅಂಕಪಟ್ಟಿಯನ್ನು ಪಡೆದಿದ್ದಲ್ಲಿ ಅಂತಹವರನ್ನು 2018-19ನೇ ಸಾಲಿನಲ್ಲಿ ಸ್ನಾತಕೋತ್ತರ ಕೋರ್ಸ್‌ಗೆ ಪ್ರವೇಶ ನೀಡಬೇಕಾಗುತ್ತದೆ ಎಂಬ ವಿಷಯಗಳನ್ನು ಶೈಕ್ಷಣಿಕ ಮಂಡಳಿಯ ಮುಂದೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ಕುಲಸಚಿವರು I/c

ಕುಲಪತಿಗಳು 24/8

ಮುಂದುವರೆದು 2013-14 ಮತ್ತು 2014-15ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಇನ್‌ಹೌಸ್ ಕೋರ್ಸ್‌ನ ವಿದ್ಯಾರ್ಥಿಗಳು ಅನುತ್ತೀರ್ಣ ಅಥವಾ ವ್ಯಾಸಂಗವನ್ನು ಅಪೂರ್ಣಗೊಳಿಸಿದ್ದರೆ ಅಂತಹ ವಿದ್ಯಾರ್ಥಿಗಳ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು.

**ತೀರ್ಮಾನ: 1. ಮಾನ್ಯತೆ ಪಡೆದ ಕೋರ್ಸ್‌ಗಳ/ ಶುಲ್ಕಗಳ ಬಗೆಗಿನ ಆಧ್ಯಾದೇಶಗಳನ್ನು ಈಗಾಗಲೇ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ 03 ವರ್ಷಗಳಿಂದ ಯಾವುದೇ ಪ್ರವೇಶಾತಿ ಪ್ರಕ್ರಿಯೆ ನಡೆದಿರುವುದಿಲ್ಲವೆಂಬುದನ್ನು ಸಭೆಯು ಗಮನಿಸಿತು. ಸಾರ್ವಜನಿಕರು/ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರದಿಂದ ಆಧ್ಯಾದೇಶದ ಅನುಮೋದನೆ ನಿರೀಕ್ಷಿಸಿ ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ಮಾನ್ಯತೆ ಪಡೆದ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ತಕ್ಷಣವೇ ಪ್ರಾರಂಭಿಸಲು ತೀರ್ಮಾನಿಸಿತು. ಪ್ರವೇಶಾತಿ ಪ್ರಕ್ರಿಯೆಯನ್ನು ಚುರುಕುಗೊಳಿಸಲು ರಾಜ್ಯವ್ಯಾಪ್ತಿ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಜಾಹೀರಾತು/ ಪ್ರಚಾರ ನೀಡುವಂತೆ ಕ್ರಮಕೈಗೊಳ್ಳಲು ತೀರ್ಮಾನಿಸಿ, ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ಶಿಫಾರಸ್ಸು ಮಾಡಲಾಯಿತು.**

**ಇದರ ಜೊತೆಗೆ ಇನ್ನೂಳಿದ ಶಿಕ್ಷಣ ಕ್ರಮಗಳಿಗೆ ಮಾನ್ಯತೆ ವಿಷಯವು ಯು.ಜಿ.ಸಿ ಮುಂದೆ ಬಾಕಿ ಇದ್ದು, ಅವುಗಳ ಮಾನ್ಯತೆ ಪಡೆದುಕೊಳ್ಳಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.**

**2. 2013-14 ಹಾಗೂ 2014-15ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಅನುತ್ತೀರ್ಣರಾದ ಅಥವಾ ವ್ಯಾಸಂಗವನ್ನು ಅಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಕೋರ್ಸ್‌ಗೆ ಪ್ರವೇಶಾತಿಗೆ ಅವಕಾಶ ಕಲ್ಪಿಸಲು ತೀರ್ಮಾನಿಸಲಾಯಿತು. ವಿಶ್ವವಿದ್ಯಾನಿಲಯದ ಇನ್‌ಹೌಸ್ ಕೋರ್ಸ್‌ನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಲ್ಲಿ, ಅವರಿಗೆ ಶೇಕಡಾ 50 ರಷ್ಟು ಬೋಧನಾ ಶುಲ್ಕದಲ್ಲಿ ವಿನಾಯಿತಿ ನೀಡಲು ನಿರ್ಣಯಿಸಿ, ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ಶಿಫಾರಸ್ಸು ಮಾಡಲಾಯಿತು.**

**ವಿಷಯ ಸಂಖ್ಯೆ: 47.13**

**ವಿಷಯ: 2019-2020ನೇ ಶೈಕ್ಷಣಿಕ ಸಾಲಿನಿಂದ ಎಂ.ಎ. ಶಿಕ್ಷಣಶಾಸ್ತ್ರ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ದೂರಶಿಕ್ಷಣ ವ್ಯವಸ್ಥೆಯಲ್ಲಿ ಎನ್.ಸಿ.ಟಿ.ಇ. ಎಂ.ಎಡ್. ಕೋರ್ಸ್‌ನ್ನು ಸ್ಥಗಿತಗೊಳಿಸಿರುವುದರಿಂದ ಎಂ.ಎಡ್. ಬದಲಿಗೆ ಎಂ.ಎ. ಶಿಕ್ಷಣಶಾಸ್ತ್ರ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದ್ದೇವೆ. ಪ್ರಸ್ತುತದಲ್ಲಿ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಮುಖ್ಯಸ್ಥರನ್ನು ಸೇರಿ ಒಟ್ಟು ಏಳು ಜನ ಅಧ್ಯಾಪಕರುಗಳಿರುತ್ತಾರೆ. ಬಿ.ಎಡ್. ಕೋರ್ಸ್‌ಗೆ ತಾತ್ಕಾಲಿಕವಾಗಿ ಯು.ಜಿ.ಸಿ. ಅನುಮತಿ ನೀಡದೇ ಇರುವುದರಿಂದ, ದೂರಶಿಕ್ಷಣ ವ್ಯವಸ್ಥೆಯಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ಅಜೀಂ ಪ್ರೇಂ ಜಿ ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯಗಳಲ್ಲಿ ಎಂ.ಎ. ಶಿಕ್ಷಣಶಾಸ್ತ್ರ ಕಾರ್ಯಕ್ರಮವು ಪ್ರಸ್ತುತ ಚಾಲನೆಯಲ್ಲಿದೆ. ವಿಭಾಗದಲ್ಲಿ ಎಂ.ಎ ಶಿಕ್ಷಣಶಾಸ್ತ್ರ ಕಡ್ಡಾಯವಾಗಿ ಪ್ರಾರಂಭಿಸಬೇಕಾಗಿರುತ್ತದೆ. ಶಿಕ್ಷಣಶಾಸ್ತ್ರ ವಿಭಾಗಕ್ಕೆ ಅಧ್ಯಾಪಕರುಗಳ ಹುದ್ದೆಗಳು ಸರ್ಕಾರದಿಂದ ಈಗಾಗಲೇ ಅನುಮೋದನೆ ಗೊಂಡಿರುತ್ತವೆ. ವಿಭಾಗದಲ್ಲಿ ಈಗಾಗಲೇ ಸ್ನಾತಕ ಮಟ್ಟದಲ್ಲಿ ಶಿಕ್ಷಣಶಾಸ್ತ್ರ ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಅನುಕೂಲವಾಗು ಹಿತದೃಷ್ಟಿಯಿಂದ ಎಂ.ಎ ಶಿಕ್ಷಣಶಾಸ್ತ್ರ ಪ್ರಾರಂಭಿಸುವುದು ಸೂಕ್ತವೆಂದು ತಿಳಿಯಪಡಿಸಲಾಗಿದೆ.

ಕುಲಸಚಿವರು ಕುಲಪತಿಗಳು

ಎಂ.ಇಡಿ.ಗೆ ಪರ್ಯಾಯವಾಗಿ ಎಂ.ಎ. ಶಿಕ್ಷಣಶಾಸ್ತ್ರ ಕಾರ್ಯಕ್ರಮವನ್ನು ಕರಾಮುವಿಯ ಶಿಕ್ಷಣಶಾಸ್ತ್ರ ವಿಭಾಗದ ವತಿಯಿಂದ 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಶೈಕ್ಷಣಿಕ ಮಂಡಳಿಯ ತಾತ್ವಿಕ ಒಪ್ಪಿಗೆಯನ್ನು ಕೋರಿ ವಿಷಯ ಮಂಡಿಸಿದೆ.

**ತೀರ್ಮಾನ : ಶಿಕ್ಷಣಶಾಸ್ತ್ರ ವಿಭಾಗವು ನಡೆಸುತ್ತಿದ್ದ ಬಿ.ಇಡ್ ಕೋರ್ಸ್‌ಗೆ ಸದ್ಯ ಮಾನ್ಯತೆ ದೊರೆತಿಲ್ಲವೆಂಬ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಗಮನಿಸಲಾಯಿತು. ಎಂ.ಎ ಶಿಕ್ಷಣಶಾಸ್ತ್ರ ಕೋರ್ಸ್‌ಗೆ ಬೇಡಿಕೆ ಇದ್ದು, ವಿಭಾಗದಲ್ಲಿರುವ ಅಧ್ಯಾಪಕರ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಸದುದ್ದೇಶದಿಂದ ಎಂ.ಎ (ಶಿಕ್ಷಣಶಾಸ್ತ್ರ) ಎಂಬ ಕೋರ್ಸ್‌ನ್ನು ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಾತ್ವಿಕ ಒಪ್ಪಿಗೆ ನೀಡಲಾಯಿತು.**

ಅಂತಿಮವಾಗಿ 47ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

24/08/18

**ಕುಲಸಚಿವರು ಹಾಗೂ**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗೂ**
**ಅಧ್ಯಕ್ಷರು**

24/8

ಕುಲಸಚಿವರು

ಕುಲಪತಿಗಳು